ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 16ನೆ ಮೇ 1907.

ಸ್ಯ 1907ನೆ ಇಸವಿ ಜುಲೈ 1ರ ಲಾಗಾಯ್ತು ಸ್ಯ 1908ನೆ ಇಸವಿ ಜನವರಿ 31ರ ವರಿವಿಗೆ, ಆ ಎರಡು ದಿವಸಗಳೂ ಸೇರಿ, 7 ತಿಂಗಳ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸ್ಯ 1907ನೆ ಇಸವಿ ಜೂನ್ 15ನೆ ತಾರೀಖು ಶನಿವಾರ ಬೆಳಿಗ್ಗೆ 10 ಘಂಟೆಯ ವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗೆದು ಕೊಳ್ಳುವರೆಂದು ಇದರಿಂದ ಘೋಷಿಸ್ ಮಾಡಿದೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವದಿಲ್ಲ.

3. ದರಖಾಸ್ತು ಕವರಿನ ಮೇಲ್ಭಾಗದಲ್ಲಿ ಬರದಿರಬೇಕಾದ ಮೇಲ್ವಿಳಾಸವೇನಂದರೆ :—

"ಕುರೀ ಮಾಂಸದ ಸರಬರಾಯಿ ದರಖಾಸ್ತು"

4. ಕುರಿ ಮಾಂಸದ ಸರಬರಾಯಿಗೆ 75 ರೂಪಾಯಿ, ನಗದಾಗಿಯಾಗಲಿ ಕರ್ಣಾಟ ನೋಟಿನ ಮೂಲಕವಾಗಿಯಾಗಲಿ ಠೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವದಿಲ್ಲ.

5. ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಾಯ್ತವುಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫೀಸಿನಲ್ಲಿ ಬಿಡಿಯುವರು.

6. ಮಾಂಸವನ್ನು ಒಂದು ರೂಪಾಯಿಗೆ ಇಪ್ಪತ್ತು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಮಾಂಸವು ಒಳ್ಳೇದಾಗಿಯೂ ಸೂಪರಿಂಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಸಂವತ್ಸರದ ಅಂದಾಜಾ ಖರ್ಚು.

ಮೂಳೆ ಇಲ್ಲದ ಮಾಂಸ—20,000 ಪೌಂಡುಗಳು.

ಮೇಲೆ ಕಂಡ ಪರಿಮಾಣದ ಮೇಲೆ ಇಪ್ಪತ್ತೈದು ಆಗಬೇಕೆಂದು ಖಾತರಿ ಯಾವುದೂ ದೊರೆಯುವುದಿಲ್ಲ.

7. ಸೂಪರಿಂಟೆಂಡೆಂಟರವರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ಉಳಿಸಿಕೊಂಡಿದ್ದಾರೆ.

8. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರನು ಹಾಜರ್ಮಾಡಿದ ಠೇವಣೀ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅತನ ದರಖಾಸ್ತು ಮಂಜೂರಾಗಿದೆ ಎಂದು ಆತನಿಗೆ ತಿಳಿಯಪಡಿಸಿದ ಒಂದು ವಾರದೊಳಗಾಗಿ ಆತನು ಕಂಟ್ರಾಕ್ಟು ಕರಾರನ್ನು ಬರೆದುಕೊಡದೇ ಹೋದರೂ ಸರಿಯೇ, ಅಥವಾ 150 ರೂಪಾಯಿ, ನಗದಾಗಿಯಾಗಲಿ ಸರಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲೆ ಕಂಡ ಠೇವಣೀ ಮೊಬಲಗು ಶಿವಾಯಿ ಜಮೆಯಾಗಿ ತೆಗದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರನಿಗೆ ನಗದು ಹಣ ಮುಂಗಡವಾಗಿ ಪಾವತಿ ಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಪ್ರತಿ ತಿಂಗಳ ಗುರೆ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಕುರೀ ಮಾಂಸವು ಪ್ರತಿ ದಿವಸ ಬೆಳಿಗ್ಗೆ 7 ಘಂಟೆ ವಳಗಾಗಿ ಜೈಲಿನಲ್ಲಿ ಸಿದ್ಧಪಡಿಸತಕ್ಕದ್ದು.

11. ಕಂಟ್ರಾಕ್ಟನ್ನು ಪಿಕ್ಕಿ ಇಜಾರೆಯಾಗಿ ಕೊಡಕೂಡದು.

12. ಕಂಟ್ರಾಕ್ಟು ಪರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಮಾಂಸವನ್ನು ಸರಬರಾಯಿ ಮಾಡಿದರೂ ಸರಿಯೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮುನಾಸಬು ಅರಿತು 50 ರೂಪಾಯಿಗಳಿಗೆ ಹೆಚ್ಚದೆ ದಂಡ್ಯಾನೆಯನ್ನು ವಸೂಲ್ಮಾಡಬಹುದು; ಪದೇಪದೇ ಕರಾರಿಗೆ ತಪ್ಪಿಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಳಾಗಿ ತೆಗದುಕೊಳ್ಳಬಹುದು.

13. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂಗತಿಗಳೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಫೈಸಲೆ ಅಬೈರ್ ಫೈಸಲಾಗಿರತಕ್ಕದ್ದು.

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರು ಜೈಲ್ ಇನ್ಸ್‌ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗದುಕೊಂಡ ತರುವಾಯ ತಮ್ಮ ಕರಾರಿನಂತೆ ನಡಿಯಲು ಇಷ್ಟಪಡದಿದ್ದರೆ ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟು ಬಿಡಬೇಕು.

17. ಕಂಟ್ರಾಕ್ಟುದಾರ್ರು ಸರಬರಾಯಿ ಮಾಡಿದ ಜಿನಸಿ ಬಿಲ್ಲುಗಳನ್ನು ಹಣ ಪಾವತಿ ಬಗ್ಗೆ ಸೂಪರಿಂಟೆಂಡೆಂಟರವರು ಮೊಹರೂದು ಮಾಡಿದ ತಾರೀಖು ಅಥವಾ ಅದಕ್ಕೆ ತತ್ಪೂರ್ವವಾಗಲಿ ಹಾಜರು ಮಾಡಬೇಕು. ತಪ್ಪಿದರೆ ಸೂಪರಿಂಟೆಂಡೆಂಟರವರು ಸದರೀ ತಾರೀಖು ತರುವಾಯ ಹಾಜರು ಮಾಡಿದ ಬಿಲ್ಲುಗಳಿಗೆ ಹಣ ಪಾವತಿ ಮಾಡಲು ಇನ್ಕಾರು ಮಾಡುವರು. ಇಜಾರೆದಾರರು ತಪ್ಪಿ ಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತಿಮಾಡಿ ಕೊಡಬೇಕು. ವಿಚಾರ—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರಯಲಾರದು.

ಪಿ. ಎಸ್. ಅಚ್ಯುತರಾವ್,
ಸೂಪರಿಂಟೆಂಡೆಂಟ್.